# ರಣವೀರ್ ಪ್ರೀತಿ



ಬಾಲಿವುಡ್‌ನ ಬಿಂದಾಸ್ ಜೋಡಿ ರಣವೀರ್ ಸಿಂಗ್ ಮತ್ತು ದೀಪಿಕಾ ಅವಕಾಶ ಸಿಕ್ಕಿದಾಗಲೆಲ್ಲ ಪರಸ್ಪರರನ್ನು ಹಾಡಿ ಹೊಗಳುವುದು ಇನ್ನೂ ನಿಂತಿಲ್ಲ. ಮದುವೆಯಾಗಿ ವರ್ಷಗಳು ಉರುಳಿದರೂ ಇಬ್ಬರೂ ತಮ್ಮ ಪ್ರೀತಿಯ ಬಗ್ಗೆ ಎಲ್ಲೆಂದರಲ್ಲಿ ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಇದು ಕೆಲವರ ಹೊಟ್ಟೆ ಉರಿಸಿದರೆ, ಇನ್ನು ಕೆಲವರಿಗೆ ತಮಾಷೆ.

ದೀಪಿಕಾಳನ್ನು ಮದುವೆಯಾಗಲು ತಾನು ಪಟ್ಟ ಪಾಡಿನ ಬಗ್ಗೆ ರಣವೀರ್ ಇತ್ತೀಚೆಗೆ ಹೇಳಿಕೊಂಡಿದ್ದಾನೆ. 'ರಿಲೇಷನ್‌ಷಿಪ್ ಆರಂಭವಾದಾಗಲೇ ಈಕೆಯನ್ನೇ ಮುಂದೊಂದು ದಿನ ಮದುವೆಯಾಗುತ್ತೇನೆ ಅಂದುಕೊಂಡಿದ್ದೆ. ಆಕೆಯನ್ನು ಇಂಪ್ರೆಸ್ ಮಾಡಲು ನಾನು ಸದಾ ಯತ್ನಿಸುತ್ತಿದ್ದೆ. ಆಕೆಗೆ ಹೂಗಳೆಂದರೆ, ಅದರಲ್ಲೂ ಲಿಲ್ಲೀ ಹೂಗಳೆಂದರೆ ಬಹಳ ಇಷ್ಟ. ಪ್ರತಿ ಸಲ ಭೇಟಿಯಾದಾಗಲೂ ನಾನು ಹೂವಿನ ರಾಶಿಯ ಜೊತೆಗೇ ಹೋಗುತ್ತಿದ್ದೆ' ಎಂದು ಹಳೆಯ ನೆನಪುಗಳನ್ನು ಬಿಚ್ಚಿಟ್ಟಿದ್ದಾನೆ ರಣವೀರ್.

ಮಗ ಹೂಗಳಿಗಾಗಿ ಮಾಡುತ್ತಿದ್ದ ಖರ್ಚಿನ ಬಗ್ಗೆ ಆತನ ಅಪ್ಪನೂ ಒಮ್ಮೆ ಎಚ್ಚರಿಸಿದ್ದರಂತೆ! 'ಸುಮ್ಮನೇ ಈ ಹೂಗಳ ಮೇಲೆ ಇಷ್ಟೊಂದೇಕೆ ಹಣ ಸುರಿಯುತ್ತಿದ್ದೀಯಾ..' ಎಂದು ಅಪ್ಪ ಕೇಳಿದ್ದರಂತೆ. 'ಐಶ್ವರ್ಯದೇವತೆಯ ರೂಪದಲ್ಲಿ ಎಲ್ಲವೂ ವಾಪಸ್ ಬರುತ್ತೆ, ಸುಮ್ಮನಿರು' ಎಂದು ಮಗ ಅಪ್ಪನಿಗೆ ಉತ್ತರಿಸಿದ್ದನಂತೆ.

'ದೀಪಿಕಾ ನನ್ನ ಶಕ್ತಿ. ಆಕೆಯ ಬೆಂಬಲ ಇಲ್ಲದೆ ಚಿತ್ರರಂಗದಲ್ಲಿ ನಾನು ಇಷ್ಟೆಲ್ಲ ಸಾಧಿಸಲು ಸಾಧ್ಯವಿರಲಿಲ್ಲ' ಎನ್ನುವುದು ರಣವೀರ್ ಸಿಂಗ್‌ನ ಫೈನಲ್ ಟಾಕ್. ಭಾರತದ ಮೊದಲ ಕ್ರಿಕೆಟ್ ವಿಶ್ವಕಪ್ ಗೆಲುವಿನ ಕುರಿತ '83' ಚಿತ್ರದ ಬಿಡುಗಡೆಯನ್ನೇ ಆತನೀಗ ಕಾದು ಕುಳಿತಿದ್ದಾನಂತೆ. ಅಂದ ಹಾಗೆ ಅದರಲ್ಲೂ ರಣವೀರ್– ದೀಪಿಕಾ ಅವರದ್ದು (ಕಪಿಲ್‌ದೇವ್– ರೋಮಿ) ಗಂಡ–ಹೆಂಡತಿಯ ಪಾತ್ರ. ■



# ಮಿಥುನ್ ಮಗನಿಗೆ ಪಟ್ಟ

ನಾಲ್ಕು ದಶಕಗಳ ಕಾಲ ಬಾಲಿವುಡ್‌ನಲ್ಲಿ ಮೆರೆದ ಮಿಥುನ್ ಚಕ್ರವರ್ತಿಯ ಮಗ ನಮಾಶಿ ಚಕ್ರವರ್ತಿ ಈಗ ಹೊಸ ಹೀರೊ. ಆತ ನಟಿಸುತ್ತಿರುವ ಚಿತ್ರದ ಹೆಸರು 'ಬ್ಯಾಡ್ ಬಾಯ್'. ಬಾಲಿವುಡ್‌ನಲ್ಲಿ ಹಿಟ್ ಚಿತ್ರಗಳನ್ನು ನಿರ್ದೇಶಿಸಿರುವ ರಾಜ್‌ಕುಮಾರ್ ಸಂತೋಷಿ ಈ ಚಿತ್ರದ ನಿರ್ದೇಶಕ. ನೋಡಲು ಅಪ್ಪನ ತದ್ರೂಪದಂತೆ ಕಾಣುವ ಸ್ಫುರದ್ರೂಪಿ ನಮಾಶಿಗೆ ಅಪ್ಪನ ಜೊತೆ ತನ್ನನ್ನು ಹೋಲಿಸಿಕೊಳ್ಳುವುದು ಇಷ್ಟವಿಲ್ಲ. 'ಅವರೆಲ್ಲಿ.. ನಾನೆಲ್ಲಿ? ನನ್ನ ಅಪ್ಪ ಬಾಲಿವುಡ್‌ನಲ್ಲಿ ಒಂದು ದಂತಕಥೆಯಾದವರು. ಸಹಜವಾಗಿಯೇ ಅವರ ಬಾಡಿ ಲ್ಯಾಂಗ್ವೇಜ್ ನನ್ನಲ್ಲಿ ಬಂದಿದೆ. ಅದು ಬಿಟ್ಟರೆ ಅವರ ನಟನೆಯ ಜೊತೆಗೆ ಹೋಲಿಸಲಾಗದು' ಎಂದಿದ್ದಾನೆ ನಮಾಶಿ.

'ಬ್ಯಾಡ್‌ಬಾಯ್' ಚಿತ್ರದ ಪೋಸ್ಟರನ್ನು ಬಾಲಿವುಡ್‌ನ 'ಸುಲ್ತಾನ್' ಸಲ್ಮಾನ್ ಖಾನ್ ಬಿಡುಗಡೆ ಮಾಡಿದ್ದು, ಅದನ್ನು ನೋಡಿ ಮೆಚ್ಚಿ ಅಮಿತಾಭ್ ಬಚ್ಚನ್ ಟ್ವೀಟ್ ಮಾಡಿದ್ದು ಎಲ್ಲವೂ ನಮಾಶಿಯ ಧೈರ್ಯವನ್ನು ಹೆಚ್ಚಿಸಿದೆಯಂತೆ. 'ಶೂಟಿಂಗ್ ಎಲ್ಲವೂ ಚೆನ್ನಾಗಿತ್ತು. ಕೊರೊನಾ ದಾಳಿಯಿಂದ ಬಿಡುಗಡೆ ತಡವಾಗಿದೆ. ಆದರೆ ಒಂದು ಖುಷಿಯಂತೂ ಇದೆ. ಕೆಲವು ಸಮಯದಿಂದ ನಾನು ನಟನೆಯ ಅವಕಾಶಕ್ಕಾಗಿ ಪ್ರಯತ್ನಿಸಿದ್ದರೂ ಫಲ ಸಿಕ್ಕಿರಲಿಲ್ಲ. ಈ ಚಿತ್ರ ನನ್ನ ಸ್ವಪ್ರಯತ್ನದಿಂದ ಸಿಕ್ಕಿದ ಅವಕಾಶ' ಎನ್ನುವುದು ನಮಾಶಿ ವಿವರಣೆ.

ಅಪ್ಪನ ಜನಪ್ರಿಯತೆ ಮತ್ತು ಸ್ಟಾರ್‌ಡಮ್ ಬಗ್ಗೆ ನಮಾಶಿಗೆ ಅರಿವಿದೆ. 'ಪ್ರೇಕ್ಷಕರು ನನ್ನನ್ನು ಅವರ ಸ್ಟಾರ್‌ಡಮ್ ಜೊತೆಗೆ ಹೋಲಿಸಿದರೆ ನನಗೇ ಕಷ್ಟ. ಇನ್ನೊಬ್ಬ ಮಿಥುನ್‌ರನ್ನು ಬಯಸಿದರೆ ನನ್ನ ತೊಂದರೆಗಳು ಹೆಚ್ಚುತ್ತವೆ. ಈ ಚಿತ್ರದ ಕಥೆ ರೊಮ್ಯಾಂಟಿಕ್ ಕಾಮಿಡಿ. ನನ್ನದೇ ಆದ ಅಭಿನಯಶೈಲಿಯನ್ನು ನಂಬಿಕೊಂಡಿದ್ದೇನೆ' ಎಂದು ನಮಾಶಿ ಹೇಳಿದ್ದಾನೆ. ನಿರ್ಮಾಪಕರ ಮಗಳು ಅಮ್ರೀನ್ ಖುರೇಶಿ ಚಿತ್ರದ ನಾಯಕಿ.

■ ಬಿಂದು